CONSTRUCTION OF TANK NEAR KALLAHALLI, HOSPET TALUK.

54. Sri B. SATYANARAYANA SINGH (Hospet) .—

Will the Minister for Public Works and Electricity be pleased to state :—

(*a*) when the survey for the construction of tank near Kallahalli, Hospet taluk, Bellary District was completed ;

(*b*) the amount of estimate ;

(*c*) when the Government proposes to take up the work as the tank is situated in an area which is chronically famine striken area ?

Sri H. M. CHANNABASAPPA (Minister for Public Works and Electricity) .—

(*a*) The survey work is not yet completed.

(*b*) Does not arise in view of reply to clause (*a*) .

(*c*) This work will be considered after the investigations are completed and if the project is found to be feasible both technically and financially.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ನನಗೆ ತಿಳಿದ ಮಟ್ಟಿಗೆ ಕಳೆದ ಆರು ವರ್ಷಗಳಿಂದ ಹೊಸಪೇಟೆ ತಾಲ್ಲೂಕಿನ ಕಲ್ಲಹಳ್ಳಿ ಬಳಿ ಕೆರೆಯ ನಿರ್ಮಾಣಕ್ಕೆ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ. ಇದು ಪೂರ್ಣವಾಗುವುದಕ್ಕೆ ಎಷ್ಟು ವರ್ಷ ಬೇಕಾಗಬಹುದು ? ಕೆಲಸ ತೆಗೆದುಕೊಳ್ಳುವುದಕ್ಕೆ ಎಷ್ಟು ವರ್ಷಗಳು ಬೇಕಾಗಬಹುದು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್‌ವೆಸ್ಟಿಗೇಷನ್ ಪ್ರಾರಂಭವಾಗಿರುವುದೇ 16ನೇ ಮೇ 1969ರಲ್ಲಿ. ಆದ್ದರಿಂದ ಆರು ವರ್ಷ ಎನ್ನುವುದು ಸರಿಯಲ್ಲ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.— ತಾವು ಹೇಳಿದ ಪ್ರಕಾರ, ಈಗಾಗಲೇ ಮೂರು ವರ್ಷವಾಗಿದೆ. ಈ ಕೆರೆಯ ನಿರ್ಮಾಣದ ಕೆಲಸ ಪೂರ್ಣಗೊಳ್ಳುವುದಕ್ಕೆ ಎಷ್ಟು ವರ್ಷ ಬೇಕು?

ಶ್ರೀ ಎಚ್. ಎಂ ಚೆನ್ನಬಸಪ್ಪ.— ಇನ್‌ವೆಸ್ಟಿಗೇಷನ್ ನಡೆಯುತ್ತಾ ಇರತಕ್ಕ ವ್ಯಾಲಯಲ್ಲ ಕಲ್ಲಹಳ್ಳಿ ಕೆರೆಗೆ ಸಾಕಷ್ಟು ನೀರು ಸಿಕ್ಕುತ್ತದೆಯೇ ಎಂದು ಇನ್‌ವೆಸ್ಟಿಗೇಷನ್ ಆಗಬೇಕಾಗಿದೆ. ಅದಕ್ಕೊಸ್ಕರ ಗೇಜಿಂಗ್ ನೋಡಬೇಕು ಎಂದು ತೀರ್ಮಾನಮಾಡಿದ್ದೇವೆ. ಗೇಜಿಂಗ್‌ನ್ನು ಅವಶ್ಯಕವಿದ್ದರೆ 2—3ವರ್ಷ ಮಾಡಬೇಕಾಗಿ ಬರುತ್ತದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ತಾವು ಹೇಳಿದ ಪ್ರಕಾರ ಇನ್‌ವೆಸ್ಟಿಗೇಷನ್ ಪ್ರಾರಂಭವಾಗಿ ಮೂರು ವರ್ಷವಾಯಿತು. ಈಗ ಇನ್‌ವೆಸ್ಟಿಗೇಷನ್ ಕೆಲಸ ಮುಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಪೊದಲು ನೀರು ಇದೆಯೇ ಇಲ್ಲವೇ ಎಂದು ನೋಡುವುದಕ್ಕೆ ಗೇಜಿಂಗ್ ಆರ್ಡರ್ ಮಾಡಿರುವುದು 1969ರಿಂದ ಈಚೆಗೆ. ಗೇಜಿಂಗ್ ನಡೆದ ಮೇಲೆ ಸಾಕಷ್ಟು ನೀರು ಇದ್ದರೆ, ಆಗ್ಗೆ ಅದರ ಬಗ್ಗೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ. ಇಲ್ಲದಿದ್ದ ಪಕ್ಷದಲ್ಲಿ ಅದು ಸಾಧ್ಯವಾಗುವುದಿಲ್ಲ.